ಮಾವನವರ ಪಂಚೆ ಅವನ ಕಾಲಿನ ತುದಿಗೆ ಸಿಕ್ಕಿಸಿಕೊಂಡಿತು. ತೂರಾಡಿಕೊಂಡು ಈಚೆ ಬಂದ ಅವನು ಡಾಕ್ಟರ್‌ರ ಪಂಚೆಯನ್ನು ಸಂಪೂರ್ಣವಾಗಿ ಸೆಳೆದುಕೊಂಡೇ ಈಚೆ ಬಂದನು.

ನೋಡಿದರೆ ಸುತ್ತ ಕರ್ಫ್ಯೂ ಹೊಡೆದಂತಾಗಿತ್ತು. ಎಲ್ಲರೂ ಹೆದರಿ ಇಳಿದು ನಿಂತಿದ್ದರು. ಪಂಚೆ ಸೆಳೆದ ದುಶ್ಯಾಸನ ಇದೇನು ಮಾಡುವುದು ಎಂದು ಸುತ್ತಿದ ಪಂಚೆ ಹಿಡಿದು ಎಲ್ಲರ ಕಡೆ ನೋಡುತ್ತಿದ್ದನು. ಮತ್ತೆ ಡಾಕ್ಟ್ರಿಗೆ ಲುಂಗಿ ಕೊಡಲು ಹೋದರೆ ಇನ್ನೇನು ಬೈಯುವರೋ ಎಂಬ ಹೆದರಿಕೆಯಲ್ಲಿ ಕಂಗಾಲಾಗಿ ಬಿಟ್ಟಿದ್ದನು. ಇತ್ತ ಮಾವ ಯಾವ ಪರಿವೂ ಇಲ್ಲದೆ ಬರಿ ನಿಕ್ಕರಿನಲ್ಲಿ ಆಟೊದೊಳಗೆ ಬಗ್ಗಿ ರೋಗಿಯನ್ನು ಪರೀಕ್ಷಿಸುತ್ತಿದ್ದರು. ತಮ್ಮ ವಸ್ತ್ರಾಪಹರಣವಾದ ಅನಾಹುತದ ಅರಿವೂ ಅವರಿಗಿರಲಿಲ್ಲ. ಸಾಯುವ ಸ್ಥಿತಿಯಲ್ಲಿರುವ ಮನುಷ್ಯನನ್ನು ಉಳಿಸಲು ಅವರು ಹೆಣಗಾಡುತ್ತಿದ್ದರು. ಆಟೊದಿಂದ ಅವನ ಇಳಿಸಿ ಮನೆಯೊಳಗೆ ತಂದು ಹಾಕಿಕೊಂಡು ಚಿಕಿತ್ಸೆ ನೀಡಿದರು. ಲುಂಗಿ ಸೆಳೆದ ದುಶ್ಯಾಸನ ಆರಾಮಾಗಿ ಬೀಡಿ ಸೇದುತ್ತಾ ಏನೂ ಆಗಿಲ್ಲವೆಂಬಂತೆ ಕಟ್ಟೆ ಮೇಲೆ ಕೂತಿದ್ದನು. 'ಲೇ ಪ್ರಾಣ ಉಳಿಸೋ ಡಾಕ್ಟ್ರು ಮಾನಾನೇ ತೆಗೆದೆಯಲ್ಲೋ ಗೆಂಡೆತಿಮ್ಮ' ಎಂದು ಉಳಿದವರು ಅವನ ಹಂಗಿಸಿ ನಗುತ್ತಿದ್ದರು.

'ಕೊನೇಉಸಿರು ಹೊರಗೆ ಹಾರಿ ಹೋಗುವುದರಲ್ಲಿತ್ತು. ಹಟ ಹಿಡಿದು ಅವನ ಉಸಿರ ಹಿಡಿದು ನಿಲ್ಲಿಸಿದೆ. ಒಂದು ನಿಮಿಷ ತಡವಾಗಿದ್ದರೂ ದೇವರು ಅವನ ಕರ್ಕೊಂಡು ಬಿಡ್ತಿದ್ದ' ಎಂದು ಗೆಲುವಿನ ನಗೆಯಲ್ಲಿ ಮಾವ ನನಗೆ ಹೇಳಿದರು. ವ್ಯಕ್ತಿಯ ಪ್ರಾಣ ಉಳಿಸುವಾಗ ವೈದ್ಯರು ಇಹಪರವನ್ನು ಮರೆತು ಹೇಗೆ ಹೋರಾಡುತ್ತಾರೆ ಎನ್ನುವುದನ್ನು ನಾನು ಕಂಡಿದ್ದು ಅದೇ ಮೊದಲು. ಆಗ ಮಾವನ ಬಗ್ಗೆ ಹೆಮ್ಮೆ ಮೂಡಿತು. ಆದರೆ ಈ ಅಭಿಮಾನ ಹೆಚ್ಚು ದಿನ ಉಳಿಯಲಿಲ್ಲ.

ಹೀಗೆ ಇನ್ನೊಬ್ಬರ ಪ್ರಾಣ ಉಳಿಸಿದ ನನ್ನ ಮಾವ ಒಂದು ದಿನ ಮಾತ್ರ ನನ್ನ ಪ್ರಾಣವನ್ನೇ ತೆಗೆದಿದ್ದರು. ಇದು ಮತ್ತೊಂದು ಸೋಜಿಗದ ಘಟನೆ. ಇದನ್ನು ನಿರೂಪಿಸಿಕೊಳ್ಳಲು ನನಗೆ ಈ ಕ್ಷಣಕ್ಕೆ ಮುಜುಗರ ಆಗುತ್ತಿದೆಯಾದರೂ ಈ ಫಜೀತಿಯ ಘಟನೆಯನ್ನು ಹೇಳಲೇಬೇಕು. ಅದು ಆಗಿದ್ದು ಹೀಗೆ:

ಮೂಲವ್ಯಾಧಿ ಎನ್ನುವ ರೋಗ ಎನ್ನುವುದಿದೆ ಎಂದು ನನಗೆ ಗೊತ್ತಾಗಲು ಮದುವೆಯಾಗಬೇಕಾಯಿತು. ಅದು ಹೇಗೆಂದರೆ, ಹೊಸ ಜೋಡಿಗಳಿಗೆ ಕರೆಸಿ ಊಟ ಹಾಕುವುದು ಸಂಬಂಧಿಕರಲ್ಲಿ ಮಾಮೂಲು ಸಂಗತಿ. ಜೊತೆಗೆ ಪ್ರತಿಷ್ಠೆಯ ಸಂಗತಿ ಕೂಡ ಹೌದು. ನನ್ನ ಮದುವೆಗೆ ಬಂದಿದ್ದ ನೆಂಟರು, ಗೆಳೆಯರು, ರಕ್ತ ಸಂಬಂಧಿಗಳು ನಿಖಾಃ ಊಟ ತಿಂದು ತೇಗಿದ ಮೇಲೆ ಉಪಚಾರದ ಮಾತಿಗೆ ಬಂದರು. 'ಮದುಮಕ್ಕಳು ನಮ್ಮ ಮನೆಗೆ ತಪ್ಪದೆ ಊಟಕ್ಕೆ ಬರಲೇಬೇಕು. ಒಂದು ದಿನ ಬಿಡುವು ಮಾಡಿಕೊಂಡು ಬನ್ನಿ' ಎಂದು ಉಚಿತ ಆಹ್ವಾನ ಕೊಟ್ಟು ಕಾಣೆಯಾದರು. ಕರೆದವರು ಅಷ್ಟೇನು ಸೀರಿಯಸ್ಸಾಗಿ ಹೇಳದೆ ಹೋಗಿದ್ದರೂ ನಾನು ಮಾತ್ರ ಈ ವಿಷಯವನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡೆ.

'ಅಷ್ಟು ಕಾಳಜಿಯಿಂದ ಹೇಳಿ ಹೋಗಿದ್ದಾರೆ. ಹೋಗದಿದ್ದರೆ ಅವರು ಮನಸ್ಸಿಗೆ ಬೇಜಾರು ಮಾಡಿಕೊಳ್ಳುತ್ತಾರೆ. ಮದುವೆಯಾದ ಮೇಲೆ ಈ ನನ್ಮಗನಿಗೆ ಧಿಮಾಕು ಬಂತು ನೋಡು ಎಂದು ಆಡಿಕೊಳ್ಳುತ್ತಾರೆ. ಹಿಂಗಾಗಿ ಮದ್ವೆಗೆ ಬಂದ ಯಾರ ಮನೆಯನ್ನೂ ತಪ್ಪಿಸೋದು ಬೇಡ. ನಡೀ ಹೋಗೋಣವೆಂದು' ಹೆಂಡತಿಯನ್ನು ಎಳೆದುಕೊಂಡು ಮನೆಮನೆಯ ಕೋರಾಣ ಊಟಕ್ಕೆ ಹಾರಿಹೋದೆ.